activities. But it is not so in case of tanning, pesticides and chemical processes.

Having consideration to various problems of the small industries and to give encouragement for their proper growth and stabilisation a bold and important decision is taken to denotify certain manufacturing processes from the purview of the Factories Act, 1948. The processes thus denotified are.-

1. Sawing of wood including wood working with the aid of power with machinery
2. Rice milling including hulling and polishing but excluding milling and polishing which is carried on entirely by huller and where no paddy sheller is installed with the aid of power.
3. Oil extraction including decorticating and disintegrating of vegetable seeds with the aid of power.
4. Manufacture of agarbathi with or without the aid of power.
5. Processing of arecanut with or without the aid of power.
6. Processing of tobacco (jarda) with or without the aid of power.
7. Composing types for printing, printing by letter press, lithography, photogravure or other similar processes or book binding or type casting with or without the aid of power.
8. Weaving of cotton, silk or synthetic fibres including other preparatory processes such as spinning, knitting, reeling, winding, twisting, dyeing or finishing of any textile materials.
9. Operations involving stone crushing, stone dressing or stone polishing,
10. Auto workshop
11. Dall Mills

ಡಿ೧-೩೫ ಎ.ಎಂ.

ಅಧ್ಯಕ್ಷರು.—ಈಗ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಮಾನ್ಯ ಆರೋಗ್ಯ ಸಚಿವೆಯವರಿಂದ ಉತ್ತರ.

ಶ್ರೀಮತಿ ಮನೋರಮ ಮಧ್ವರಾಜ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—ಮಾನ್ಯ ಸಭಾಧ್ಯಕ್ಷರೇ, ...

ಶ್ರೀ ಎಂ. ಸಿದ್ದಮಾದಯ್ಯ.—ಮಾನ್ಯ ಅಧ್ಯಕ್ಷರೆ ಮಾನ್ಯ ಸಚಿವರು ಉತ್ತರ ಕೊಡುವುದಕ್ಕಿಂತ ಮುಂಚೆ ಎರಡು ನಿಮಿಷ ಬೇಡಿಕೆ ಮೇಲೆ ನಾನು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಚರ್ಚೆ ಮುಗಿದಿದೆ.

ಶ್ರೀ ವಾಟಾಳ್ ನಾಗರಾಜ್.—ಆರೋಗ್ಯ ಇಲಾಖೆ ಬಗ್ಗೆ ಅನೇಕ ಪ್ರಮುಖ ವಿಚಾರಗಳ ಬಗ್ಗೆ ಮಾತನಾಡಬಯಸಿ ನಿನ್ನೆಯಿಂದ ಕಾದಿದ್ದೇನೆ.

ಅಧ್ಯಕ್ಷರು.—ನೀವು ನಿನ್ನೆ ಮಾತನಾಡಿದ್ದೀರಲ್ಲಾ ?

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾವಿಬ್ಬರೂ ಇನ್ನೂ ಮಾತನಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನೂ ಮಾತನಾಡಿಲ್ಲ.

ಅಧ್ಯಕ್ಷರು.—ಏಕೆ ?

ಶ್ರೀ ವಾಟಾಳ್ ನಾಗರಾಜ್.— ನಾನಂ ಮಾತನಾಡಿಲ್ಲ ಸ್ವಾಮಿ.

ಅಧ್ಯಕ್ಷರು.—ನಿಮ್ಮನ್ನು ನಿನ್ನೆ ಕರೆದರಲ್ಲವೇ ? ನೀವು ಮಾತನಾಡಿದ್ದೀರಿ ಎಂದು ನಾನಂ ಪತ್ರಿಕೆಯಲ್ಲಿ ನೋಡಿದೆ.

ಶ್ರೀ ವಾಟಾಳ್ ನಾಗರಾಜ್.—ನಾನಂ ಮಾತನಾಡಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಮ್ಮಿಬ್ಬರಿಗೂ ಅವಕಾಶ ಕೊಟ್ಟಿದ್ದರು. ಮಾತನಾಡುವುದಕ್ಕೆ ಆಗಲಿಲ್ಲ ಸ್ವಾಮಿ.

ಅಧ್ಯಕ್ಷರು.—ವಾಟಾಳ್ ನಾಗರಾಜ್ ಅವರೇ, ನೀವು ೩ ನಿಮಿಷ ನಕ್ಕಿದ್ದೀರಿ. ಶಿವರಾಮೆಗೌಡರೇ ನೀವು ೯ ನಿಮಿಷ ನಕ್ಕಿದ್ದೀರಿ. ವಾಟಾಳ್ ನಾಗರಾಜ್ ಅವರು ೭ ೦೪ ರಿಂದ ೭.೧೩ ಗಂಟೆವರೆಗೆ ನಾನ್‌ಸ್ಟಾಪ್ ಭಾಷಣ ಮಾಡಿದ್ದಾರೆ. ಆಮೇಲೆ ಶಿವರಾಮೇಗೌಡರು ೭.೧೩ ರಿಂದ ೭.೨೦ ಗಂಟೆವರೆಗೆ ಭಾಷಣ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ನಾವು ಭಾಷಣ ಮಾಡಲಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾತನಾಡುವುದಕ್ಕೆ ಹತ್ತತ್ತು ನಿಮಿಷ ಸಮಯ ಕೊಡುತ್ತೇವೆಂದು ನಿಗದಿ ಮಾಡಿದರು. ಹತ್ತತ್ತು ನಿಮಿಷ ಆಗುವುದಿಲ್ಲ ಎಂದು ನಾವು ಮಾತನಾಡತಕ್ಕ ಸಂದರ್ಭದಲ್ಲಿ ನಗಾ ಪ್ರಾರಂಭವಾಯಿತು. ಅಲ್ಲಿಗೆ ನಿಂತು ಹೋಯಿತು ಅಧ್ಯಕ್ಷರೇ.

ಶ್ರೀ ವಾಟಾಳ್ ನಾಗರಾಜ್.—ನಗು ಪ್ರಾರಂಭ ಆದುದು ಮಧ್ಯಾಹ್ನ ೩ ಗಂಟೆಯಿಂದ ಆದುದು ನನಗೆ, ತಮಗೆ ಹಾಗೂ ಶಿವರಾಮೇಗೌಡರಂ. ಈ ಮೂರೇ ಜನರಿಗೆ ಗೊತ್ತಿರುವುದು.

ಶ್ರೀ ಬಿ. ಎಂ. ಇದಿನಬ್ಬ.—ಈ ಸದನದಲ್ಲಿ ನಗುವ ಒಂದು ಪ್ರಹಸನ ಮಾಡಿ ಈ ಸದನ ಅಗೌರವ ತೋರಿಸುವುದು ಸರಿಯಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾವು ಈ ಸದನಕ್ಕೆ ಅಗೌರವ ತರುವ ಯಾವುದೇ ಮಾತನ್ನು ಆಡಲಿಲ್ಲ. ನಾವು ಆರೋಗ್ಯ ಇಲಾಖೆ ವಿಚಾರದಲ್ಲಿ ಸಲಹೆ ಸೂಚನೆಗಳನ್ನು ಕೊಡಬೇಕೆಂದು ನಮ್ಮ ಆಲೋಚನೆಯನ್ನು ತೋಡಿಕೊಂಡಿದ್ದೇವೆ. ಸಾಕಷ್ಟು ಅವಕಾಶ ಕೊಡದೇ ಹೋದರೆ ಹೇಗೆ ?

MR. SPEAKER.—I would like to read the press cuttings of what had happened yesterday, which is as follows.

> "It was a long day and there was no sign of the proceedings adjourning even after 7 P. M. Some members led by Mr. Vatal Nagaraj (IND), requested Mr. V. S. Koujalgi who was in the Chair to adjourn the Proceedings to Friday. But, Mr. Koujalgi refused, saying the Business Advisory Committee had decided to complete the discussion on the demand for grants to the department on Thursday and Minister concerned would reply on Friday.
>
> But, Mr. Nagaraj continued to insist for adjournment. MR B. M. Idinabba was asked to speak, and he finished in less than 10 minutes. Next, Mr. Nagaraj was asked to speak.

He said he needed one hour, but Mr. Kaujalgi gave him only 10 minutes.

Mr. Nagaraj started by addressing the Chair, and then there was silence. It was unusual as Mr. Nagaraj is rarely found to be gropping for words. After seeming to control himself for about a minute, Mr. Nagaraj burst out laughing, He tried to control himself and resume, but failed and sat down saying he could not continue. Mr. Shivarame Gowda (Ind) and Mr. P. G. R. Sindhia sitting next to Mr. Nagaraj were also giggling like school girls.

After an embarrassing silence, the acting Speaker asked Mr. Shivareme Gowda to Speak. Mr. Gowda stood up, and tried to speak. "Adhyakshare", he said, and started giggling. 'Sir, please ask Mr. Sindhia to go from here", he said, as he continued to giggle. Mr. Sindhia moved to his chair in the front row.

But, neither Mr. Gowda nor Mr. Nagaraj, beside him could stop laughing. As the farce continued for a couple of minutes. Mr. Kaujalagi, now in an uncomfortable situation, adjourned the Proceedings"

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೆ, ಅದು ಸ್ವತಃ ಬಂದಂತಹ ನಗು. ಯಾರಿಗೂ ಕೂಡ ತಡೆದುಕೊಳ್ಳಲಿಕ್ಕೆ ಆಗಲಿಲ್ಲ. ನಕ್ಕಿದ್ದು ನಾವು ಇಬ್ಬರೇ ಅಲ್ಲಿ, ಇಡಿ, ಸದನ ನಗೆಗಡಲಿನಲ್ಲಿ ಮುಳುಗಿತ್ತು, ಡಾ. ವಿಜಕರಡ್ಡಿ ಯವರಂ ನಮ್ಮಿಬ್ಬರಿಗೇ ಅಲ್ಲ ನಗುಬಂದಿದ್ದು ನನಗೂ ಏಕೂ ತಡೆದಂಕೊಳ್ಳಲಿಕ್ಕೆ ಆಗದೆ ನಗುಬಂತು ಏಕೆ ಎಂದೂ ಗೊತ್ತಿಲ್ಲ ಎಂದು ಹೇಳಿದರು.

ಅಧ್ಯಕ್ಷರು:—ನೀವು ನಗರಿ, ಆಳಿರಿ, ಅದು ನನಗೆ ಸಂಬಂಧಪಟ್ಟಿದ್ದಲ್ಲ. ಆದರೆ ನಿಮ್ಮಿಬ್ಬರಿಗೂ ನಿನ್ನೆ ಅವಕಾಶ ಕೊಡಲಾಗಿದೆ ಅದು ರೆಕಾರ್ಡ್‌ನಲ್ಲಿದೆ, ೧೫ ನಿಮಿಷ ಅವಕಾಶ ಕೊಡಲಾಗಿದೆಯೇ ಹೇಗೆ ಎಂಬುದನ್ನು ನಾನು ನೋಡುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ:—ಎಷ್ಟು ಹೊತ್ತು ಸಮಯಂ ಕೊಟ್ಟಿದ್ದಾರೆಂಬುದನ್ನು ತಾವು ನೋಡಿ.

ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ಆರೋಗ್ಯ ಇಲಾಖೆಯ ಬಗ್ಗೆ ಮತ್ತು ಆರೋಗ್ಯ ಸಚಿವೆಯರ ಬಗ್ಗೆ ನಮ್ಮದೇನು ತಕರಾರು ಇಲ್ಲ, ವಿರೋಧವೇನೂ ಇಲ್ಲ. ಆರೋಗ್ಯ ಸಚಿವೆಯವರ ಬಗ್ಗೆ ನಮಗೆ ಗೌರವವಿದೆ.

ಒಬ್ಬ ಮಾನ್ಯ ಸದಸ್ಯರು.— ಮಾನ್ಯ ಅಧ್ಯಕ್ಷರೆ, ನಮ್ಮ ಹೊಳಲ್ಕೆರೆ ತಾಲ್ಲೂಕಿನಲ್ಲಿ...

ಅಧ್ಯಕ್ಷರು.— ತಾವು ಏನೋ ಹೇಳುತ್ತಾರೆಂದರೆ, ಕುಳಿತುಕೊಳ್ಳಿ. ಹೊಳಲ್ಕೆರೆ ತಾಲ್ಲೂಕಿನಲ್ಲಿ ಡಾಕ್ಟರುಗಳು ಬೇಕು ಎಂದು ನೀವು ಹೇಳುತ್ತೀರಿ,

ಶ್ರೀ ಆರ್. ದಯಾನಂದರಾವ್.— ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು.— ಮಾನ್ಯ ಸದಸ್ಯರು ತಾವು ಸಹ ಕುಳಿತುಕೊಳ್ಳಬೇಕು. ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ನಿನ್ನೆ ಚರ್ಚೆ ಮುಕ್ತಾಯವಾಗಬೇಕು, ಅನಂತರ ಇವತ್ತು ಮಾನ್ಯ ಸಚಿವರು ಚರ್ಚೆಗೆ ಉತ್ತರ ಕೊಡಬೇಕೆಂದು ತೀರ್ಮಾನವಾಗಿತ್ತು. ಆದ್ದರಿಂದಲೇ ನಿನ್ನೆ ಎಷ್ಟು ಜನ ಸದಸ್ಯರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಲಿಕ್ಕೆ ಸಾಧ್ಯವೋ ಅಷ್ಟು ಸದಸ್ಯರುಗಳಿಗೆ ಕಾಲಾವಕಾಶ ಮಾಡಿಕೊಡಲಾಗಿದೆ. ಯಾವುದೇ ಡಿಪಾರ್ಟ್‌ಮೆಂಟ್ ಮೇಲೆ ಯಾವುದೇ ಸದಸ್ಯರು ಮಾತನಾಡಬೇಕಾದರೆ ಸಮಯ ಮಾಡಿಕ್ಕಿ.

ವಿರೋಧಪಕ್ಷದ ವತಿಯಿಂದ ಮಾತನಾಡಿದಂತಹ ಉಪನಾಯಕರು ಒಂದು ಗಂಟೆ ೧೩ ನಿಮಿಷಗಳ ಕಾಲ ಮಾತ್ರ ಮಾತನಾಡಿದ್ದಾರೆ. ಆದ್ದರಿಂದ ವಾಟಾಳ್ ನಾಗರಾಜ್‌ರವರು ಒಂದು ಗಂಟೆ ಅವಕಾಶ ಬೇಕೆಂದು ಕೇಳತಕ್ಕದ್ದರಲ್ಲಿ ಎಷ್ಟು ಔಚಿತ್ಯವಿದೆ ಎನ್ನುತಕ್ಕದ್ದನ್ನು ನೋಡಬೇಕು. ಆದ್ದರಿಂದ ಒಬ್ಬ ಸದಸ್ಯರಿಗೆ ಒಂದು ಗಂಟೆ ಕೊಟ್ಟರೆ ಒಂದು ಡಿಪಾರ್ಟ್‌ಮೆಂಟ್ ಮೇಲೆ ೨೨೦ ಗಂಟೆ ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತೇನು ?

ವಾಟಾಳ್ ನಾಗರಾಜ್.— ಒಂದು ಗಂಟೆ ಅವಕಾಶ ಕೊಡಿ ಎಂದು ಕೇಳತಕ್ಕ ಹಕ್ಕು ನನಗಿದೆ.

ಅಧ್ಯಕ್ಷರು.— ನಿಮಗೆ ೧೦ ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.— ಒಂದು ಗಂಟೆ ಕಾಲಾವಕಾಶ ಕೊಡಿಯೆಂದು ಕೇಳುವುದಕ್ಕೆ ನನಗೆ ಹಕ್ಕಿದೆ, ಅಧಿಕಾರ ಇದೆ. ತಾವು ಇಷ್ಟೊಂದು ಕಠೋರವಾದರೆ ಹೇಗೆ ? ನಾನು ತಮ್ಮಲ್ಲಿ ನನಗೆ ಒಂದು ಗಂಟೆ ಕಾಲಾವಕಾಶ ಕೊಡಿಯೆಂದು ಮನವಿ ಮಾಡಿಕೊಳ್ಳುತ್ತೇನೆ. ಒಂದು ಗಂಟೆ ಕಾಲಾವಕಾಶ ಕೊಡಿಯೆಂದು ಕೇಳತಕ್ಕದ್ದು ನನ್ನ ಹಕ್ಕು. ನೀವು ಆಗುವುದಿಲ್ಲ ಎಂದು ಹೇಳಿ, ಸಂತೋಷ ನಾನು ಅದನ್ನು ಧಿಕ್ಕರಿಸುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು.— ಕೇಳತಕ್ಕ ಅಧಿಕಾರ ನನ್ನದು, ಅಧಿಕಾರ ನನ್ನದು ಎಂದು ಮೂರು ಸಾರಿ ಹೇಳಿದ್ದೀರಿ, ನಿಜ.

ಶ್ರೀ ವಾಟಾಳ್ ನಾಗರಾಜ್.— ಏತಕ್ಕೆ ಸಿಟ್ಟು ಮಾಡಿಕೊಳ್ಳುತ್ತೀರಿ ?

ಅಧ್ಯಕ್ಷರು.— ಮಾನ್ಯ ವಾಟಾಳ್ ನಾಗರಾಜ್‌ರವರೇ, ನಿಮ್ಮ ಮೇಲೆ ನನಗೆ ಸಿಟ್ಟೇ ಬರುವುದಿಲ್ಲ. ನಿಮ್ಮ ಬಗ್ಗೆ ಸಿಟ್ಟಿನ ಪ್ರಶ್ನೆಯೇ ಇಲ್ಲ. ಚರ್ಚೆ ಮುಕ್ತಾಯವಾಗಿದೆಯೆಂದು ಯಾರು ಅಧ್ಯಕ್ಷತೆಯನ್ನು ವಹಿಸಿದ್ದರೋ ಅವರು ತೀರ್ಮಾನ ಕೊಟ್ಟಿದ್ದಾರೆ. ಪುನಃ ಅದನ್ನು ರೀ ಓಪನ್ ಮಾಡತಕ್ಕದ್ದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.— ನಿಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆಂಬ ಉದ್ದೇಶ ನನಗಿಲ್ಲ. ಇಂತಹ ಪ್ರಮುಖವಾದ ಆರೋಗ್ಯ ಇಲಾಖೆಯ ಬಗ್ಗೆ ಸಮಗ್ರವಾಗಿ ಚರ್ಚೆ ನಡೆಯಬೇಕಾಗಿದೆ. ಆದ್ದರಿಂದ ಅನೇಕ ಸಮಸ್ಯೆಗಳನ್ನು ಈ ಸಭೆಯಲ್ಲಿ ಹೇಳಬೇಕೆಂಬ ಭಾವನೆ ಸಮ್ಮಲ್ಲಿದೆ.

ಶ್ರೀ ಎಸ್. ಆರ್. ಶಿವರಾಮೇಗೌಡ.— ಅಧ್ಯಕ್ಷರೇ...

MR. SPEAKER.— Would you kindly resume your seat please. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ನೀವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.— ಇಂತಹ ಒಂದು ಪ್ರಮುಖವಾದ ಇಲಾಖೆ ಬಗ್ಗೆ ಬೆಳಕು ಚೆಲ್ಲಬೇಕಾಗಿದೆ. ನಾನು ಕೇಳಿದಷ್ಟೇ ತಾವು ಅವಕಾಶ ಕೊಡಬೇಕು ಎಂಬ ಉದ್ದೇಶ ನನಗಿಲ್ಲ. ತಾವು ಹತ್ತು ನಿಮಿಷ ಅವಕಾಶ ಕೊಟ್ಟರೆ ನಾನು ಮಾತನಾಡುತ್ತೇನೆ. ತಾವು ಆಗುವುದಿಲ್ಲ ಎಂದು ಹೇಳಿದರೆ ಬೇರೆ ವಿಧಿ ಇಲ್ಲದೆ ನಾವು...

ಅಧ್ಯಕ್ಷರು.— ಸಾಧ್ಯವಾಗುವುದಿಲ್ಲ. ಈಗ ಮಂತ್ರಿಗಳು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಎಸ್. ಆರ್. ಶಿವರಾಮೇಗೌಡ.— ತುಮಕೂರು ಜಿಲ್ಲಾ ಪರಿಷತ್ತಿನಲ್ಲಿ...

MR. SPEAKER.— I dont need any explanation. Nothing that the hon'ble member says will go on record.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಾನ್ಯಸದಸ್ಯರಾದ ಶ್ರೀ ಎಸ್. ಆರ್. ಶಿವರಾಮೇಗೌಡ ಅವರು ಮಾತನಾಡಿದ್ದನ್ನು ದಾಖಲು ಮಾಡಿಕೊಳ್ಳಲಿಲ್ಲ.)